ಸಂಪುಟ : 40 ಸಂಚಿಕೆ 128 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 04 ಜೂನ್ 2017 ಭಾನುವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಚಿನ್ನದ ಮೇಲೆ ಶೇ.3ರಷ್ಟು ಜಿ.ಎಸ್.ಟಿ. ದರ ವಿಧಿಸಲು ಜಿ.ಎಸ್.ಟಿ.ಮಂಡಳಿ ನಿರ್ಧಾರ



ಕಾಬೂಲ್‌ನ ಕೈರಾಖಾನ್ ನಲ್ಲಿ ಉಗ್ರರ ಸರಣಿ ಬಾಂಬ್ ಸ್ಫೋಟ:18 ಸಾವು

ಐಸಿಸಿ ಚಾಂಪಿಯನ್ ಟ್ರೋಫಿ-2017 ಇಂದು ಮಧ್ಯಾಹ್ನ 3 ಗಂಟೆಗೆ ಪಾಕಿಸ್ತಾನ ವಿರುದ್ಧ ಭಾರತ ಪಂದ್ಯ



₹55 Discount Per Gram
Gold 916 ₹ 2730/-
Silver ₹ 41000/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

## ಕದನ ವಿರಾಮ ಉಲ್ಲಂಘಿಸಿ ದಾಳಿ

**ಶಹಾಪುರ್**

ಜಮ್ಮು - ಕಾಶ್ಮೀರದ ಪೂಂಛ್ ಜಿಲ್ಲೆಯ ಶಹಾಪುರ್ ವಲಯದಲ್ಲಿ ಪಾಕಿಸ್ತಾನಿ ಪಡೆಗಳು ಕದನ ವಿರಾಮ ಉಲ್ಲಂಘಿಸಿ ದಾಳಿ ನಡೆಸಿದ್ದು, ಇದರ ಪರಿಣಾಮ ಓರ್ವ ಮಹಿಳೆ ಗಾಯಗೊಂಡಿದ್ದಾರೆ. ರಕ್ಷಣಾ ಇಲಾಖೆ ವಕ್ತಾರರು ಈ ವಿಷಯ ತಿಳಿಸಿದ್ದು, ಪಾಕ್ ಪಡೆಗಳು ಭಾರತೀಯ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಶಹಾಪುರ್ ಮತ್ತು ಸಬ್ಜಿಯನ್ ವಲಯಗಳಲ್ಲಿ ಅಪ್ರಚೋದಿತ ಷೆಲ್ ಮತ್ತು ಗುಂಡಿನ ದಾಳಿ ನಡೆಸಿವೆ. ಭಾರತೀಯ ಪಡೆಗಳು ಇದಕ್ಕೆ ಪರಿಣಾಮಕಾರಿಯಾಗಿ ಪ್ರತ್ಯುತ್ತರ ನೀಡಿವೆ.

# ಗ್ರಾಮೀಣ ಭಾಗದ ಜನತೆಗೂ ಕೌಶಲ್ಯ ಸಿಗಲಿ

## ಕೌಶಲ್ಯ ತರಬೇತಿ ಕೇಂದ್ರದ ಉದ್ಘಾಟನೆಯಲ್ಲಿ ಎಂ.ವಿ.ರಾಜಶೇಖರನ್ ಸಲಹೆ

**ತುಮಕೂರು**

ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ಉದ್ಯೋಗ ಸಿಗಬೇಕಾದರೆ ಕೌಶಲ್ಯ ಪ್ರಮುಖವಾಗಿದೆ. ಗ್ರಾಮೀಣ ಸಮುದಾಯದಿಂದ ಬರುವ ಯುವಕ, ಯುವತಿಯರಿಗೂ ಕೌಶಲ್ಯ ತರಬೇತಿ ಲಭ್ಯವಾಗಬೇಕು. ಆ ನಿಟ್ಟಿನಲ್ಲಿ ಸಂಬಂಧಪಟ್ಟವರು ಯೋಚಿಸಬೇಕು ಎಂದು ಮಾಜಿ ರಾಜ್ಯಸಭಾ ಸದಸ್ಯ ಎಂ.ವಿ.ರಾಜಶೇಖರನ್ ತಿಳಿಸಿದರು.

> ರಾಜ್ಯ ಸರ್ಕಾರವು ಕೌಶಲ್ಯಾಭಿವೃದ್ಧಿ ನಿಗಮಕ್ಕೆ ಒಂದು ವರ್ಷದ ಗುರಿಯನ್ನು ನಿಗದಿಪಡಿಸಿದ್ದು, ಸದರಿ ಗುರಿಯನ್ನು ನಿಗಮವು ಕೇವಲ 15 ದಿನಗಳಲ್ಲಿ ಸಾಧಿಸಿದೆ.ಪ್ರತಿ ತಿಂಗಳು ಒಂದೊಂದು ಕಾರ್ಯಕ್ರಮವನ್ನು ನಿಗಮವು ಹಮ್ಮಿಕೊಳ್ಳುತ್ತಿದ್ದು, ಈ ತಿಂಗಳ 15 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಜೂನ್ 15 ರಂದು ಕೌಶಲ್ಯ ದಿನಾಚರಣೆ ಎಂದು ಆಚರಿಸಲಾಗುವುದು
>
> ■ ಮುರಳೀಧರ ಹಾಲಪ್ಪ



ಅವರು ನಗರದ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಡಾ.ಶಿವಕುಮಾರಸ್ವಾಮೀಜಿ ಕೌಶಲ್ಯ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭ ಹಾಗೂ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತ ಸರ್ಕಾರದ ವತಿಯಿಂದ ನಡೆಯುತ್ತಿರುವ ಸುಮಾರು 80 ನಿಗಮಗಳಲ್ಲಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಬೆಂಗಳೂರು ಅಗ್ರಗಣ್ಯವೆನಿಸಿದೆ. ಅದರ ಅಧ್ಯಕ್ಷರಾದ ಮುರಳೀಧರ ಹಾಲಪ್ಪ ಇವರ ಕಾರ್ಯ ಶ್ಲಾಘನಾರ್ಹ ಎಂದರು.

ಕೇಂದ್ರ ಸರ್ಕಾರದ ಯೋಜನೆಯಾದ ಸ್ಕಿಲ್ ಇಂಡಿಯಾ ಕಾರ್ಯಕ್ರಮದ ಅಡಿ 40ಕೋಟಿ ಯುವಕ, ಯುವತಿಯರಿಗೆ ತರಬೇತಿ ನೀಡಿ ಕೌಶಲ್ಯವಂತರನ್ನಾಗಿಸುವುದು ಬರೀ ಸರ್ಕಾರಿ ಸಂಸ್ಥೆಗಳಿಂದ ಮಾತ್ರ ಸಾಧ್ಯವಿಲ್ಲ. ಖಾಸಗೀ ಸಂಸ್ಥೆಗಳು ಕೈಜೋಡಿಸಿದಲ್ಲಿ ಮಾತ್ರ ಈ ಯೋಜನೆ ಸಾಕಾರಗೊಂಡು ದೇಶದ ಅಭಿವೃದ್ಧಿಯಾಗಲು ಸಾಧ್ಯ ಎಂದರು. ಮಹಾತ್ಮಗಾಂಧೀಜಿಯವರು ಗ್ರಾಮಗಳ ಸಬಲೀಕರಣದ ಕನಸು ಕಂಡಿದ್ದರು. ಹೀಗಾಗಿ ಗ್ರಾಮೀಣ ಜನರಿಗೂ ಕೌಶಲ್ಯ ಸಿಗಬೇಕು. ಸಂಘ ಸಂಸ್ಥೆಗಳು ಕೈಜೋಡಿಸಿದರೆ ಸ್ಕಿಲ್ ಇಂಡಿಯಾ ಪರಿಪೂರ್ಣವಾಗುತ್ತದೆ ಎಂದರು.

ಮುರಳೀಧರ ಹಾಲಪ್ಪ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷತೆ ವಹಿಸಿಕೊಂಡ ನಂತರ ಎಲ್ಲಾ ಜಿಲ್ಲೆಗಳ ಸಮನ್ವಯ ಸಾಧಿಸಿ ಕೌಶಲ್ಯಾಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲು ವಹಿಸಿದ ಶ್ರಮವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಅದೇ ರೀತಿ ನಟರಾಜು ಅವರು ತಮ್ಮ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಕೌಶಲ್ಯ ತರಬೇತಿ » 7ನೇ ಪುಟಕ್ಕೆ

## ಜು.1ರಿಂದ ಜಿಎಸ್‌ಟಿ ಜಾರಿಗೆ

**ನವದೆಹಲಿ**



ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ನು ಜಾರಿಗೆ ತರಲು ಬಾಕಿ ಉಳಿದಿರುವ ನಿಯಮಾವಳಿಗಳಿಗೆ ದೆಹಲಿಯಲ್ಲಿ ಜಿಎಸ್‌ಟಿ ಮಂಡಳಿ ಅನುಮೋದನೆ ನೀಡಿದೆ.

ಜುಲೈ 1ರಿಂದ ದೇಶಾದ್ಯಂತ ಜಿಎಸ್‌ಟಿ ತೆರಿಗೆ ಪದ್ಧತಿಯನ್ನು ಜಾರಿಗೆತರಲು ಎಲ್ಲಾ ರಾಜ್ಯಗಳು ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಜಿಎಸ್‌ಟಿ ಮಂಡಳಿ ಈ ಮಹತ್ವದ ಒಪ್ಪಿಗೆ ನೀಡಿದೆ.

> **ಜುಲೈ 1ರಿಂದ ದೇಶಾದ್ಯಂತ ಜಿಎಸ್‌ಟಿ ತೆರಿಗೆ ಪದ್ಧತಿಯನ್ನು ಜಾರಿಗೆತರಲು ಎಲ್ಲಾ ರಾಜ್ಯಗಳು ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಜಿಎಸ್‌ಟಿ ಮಂಡಳಿ ಈ ಮಹತ್ವದ ಒಪ್ಪಿಗೆ ನೀಡಿದೆ.**

ಜಿಎಸ್‌ಟಿ ಮಂಡಳಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇರಳ ಹಣಕಾಸು ಸಚಿವ ಥಾಮಸ್ ಐಸಾಕ್, ಜಿಎಸ್‌ಟಿ ಪರಿವರ್ತನಾ ನಿಯಮಾವಳಿಗಳಿಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಎಲ್ಲಾ ರಾಜ್ಯ ಸರ್ಕಾರಗಳು ಜುಲೈ 1ರಿಂದ ಏಕರೂಪ ಪರೋಕ್ಷ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಒಪ್ಪಿಗೆ ಸೂಚಿಸಿವೆ ಎಂದರು.

ಜಿಎಸ್‌ಟಿ ಮಂಡಳಿ ಕಳೆದ ತಿಂಗಳು ಸುಮಾರು 1,200 ಸರಕುಗಳು 500 ಸೇವೆಗಳಿಗೆ ಶೇಕಡ 5, ಶೇಕಡ 12, ಶೇಕಡ 18 ಮತ್ತು ಶೇಕಡ 28ರ ತೆರಿಗೆ ದರ ನಿಗದಿ ಮಾಡಿತ್ತು.

ದೆಹಲಿಯಲ್ಲಿಂದು ನಡೆದ ಜಿಎಸ್‌ಟಿ ಮಂಡಳಿಯ 15ನೇ ಸಭೆಗೆ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅಧ್ಯಕ್ಷತೆ ವಹಿಸಿದ್ದರು. ಚಿನ್ನ, ಜವಳಿ ಮತ್ತು ಪಾದರಕ್ಷೆ ಸೇರಿದಂತೆ 6 ಸರಕುಗಳಿಗೆ ತೆರಿಗೆ ದರ ನಿಗದಿ ಮಾಡುವ ಪ್ರಸ್ತಾವ ಸಭೆಯ ಮುಂದಿತ್ತು.

## ಪೋಕ್ಸೊ ಕಾಯ್ದೆಯಡಿ 24 ಜನರಿಗೆ ಶಿಕ್ಷೆ

# 71 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆ

**ತುಮಕೂರು**

ತುಮಕೂರು ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಒಟ್ಟು 145 ಪ್ರಕರಣಗಳನ್ನು ಪೋಕ್ಸೊ ಕಾಯ್ದೆಯಡಿ ದಾಖಲಿಸಿಕೊಂಡಿದ್ದು, ಇದರಲ್ಲಿ 71 ಪ್ರಕರಣಗಳು ಖುಲಾಸೆಗೊಂಡಿದ್ದು, 24 ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ ಎಂದು ಮಕ್ಕಳ ರಕ್ಷಣಾಧಿಕಾರಿ ವಾಸಂತಿ ಉಪ್ಪಾರ್ ಅವರು ಶುಕ್ರವಾರ ಜಿಲ್ಲಾಧಿಕಾರಿ ಕೆ.ಪಿ. ಮೋಹನ್‌ರಾಜ್ ಅವರ ಅಧ್ಯಕ್ಷತೆಯಲ್ಲಿ ಈ ಸಂಬಂಧ ನಡೆದ ಸಭೆಗೆ ಮಾಹಿತಿ ನೀಡಿದರು.

ಒಟ್ಟು 95 ಪ್ರಕರಣಗಳು ವಿಲೇವಾರಿಯಾಗಿದ್ದು, 10 ಜನ ಸಂತ್ರಸ್ಥ ಮಹಿಳೆಯರಿಗೆ ಕಾನೂನು ಸೇವಾ ಪ್ರಾಧಿಕಾರ, ಅಭಯಾನಿಧಿಯಡಿಯಲ್ಲಿ ಒಟ್ಟು ರೂ.5.40 ಲಕ್ಷ ಪರಿಹಾರ ನೀಡಲಾಗಿದೆ.

2016-17ನೇ ಸಾಲಿನಲ್ಲಿ ಬಾಲನ್ಯಾಯ ಮಂಡಳಿ ಮುಂದೆ 61 ಪ್ರಕರಣಗಳು ಬಾಕಿ ಇದ್ದು, ಇವುಗಳಲ್ಲಿ 9 ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದು, 52 ಪ್ರಕರಣಗಳು ಬಾಕಿ ಇವೆ. ಮಕ್ಕಳ ಕಲ್ಯಾಣ ಸಮಿತಿ ಮುಂದೆ 264 ಪ್ರಕರಣಗಳು ದಾಖಲಾಗಿದ್ದು, 232 ಪ್ರಕರಣಗಳು ಇತ್ಯರ್ಥವಾಗಿ 32 ಪ್ರಕರಣಗಳು ಬಾಕಿ ಇವೆ.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ನಂಜೇಗೌಡ ಮುಂತಾದವರು ಹಾಜರಿದ್ದರು.

JGi Jain Public School, Tumakuru
(A Unit of Jain Group of Institutions, Bengaluru)
100% Result
HEARTY CONGRATULATIONS FROM
MANAGEMENT, PRINCIPAL, COO, & STAFF FOR THEIR SUPERB PERFORMANCE
CBSE RESULT 2016-17
TOTAL APPEARD -33
21 DISTINCTION
12 1st CLASS



Supreeth Ramu CGPA-10; Apeksha shekar CGPA-10; Arpitha BV Gowda CGPA-10; Khushi Vardiya CGPA-10; Utsavi P CGPA-10; Yuktha B N CGPA-10
Mithun Sadashiv CGPA-9.8; Vinay K P CGPA-9.6; Showrya Solur G M CGPA-9.4; Disha N CGPA-9.4; Gahana R CGPA-9.2; Amoghavarsha N R CGPA-9.2; Yashoram R CGPA-9.2; Chandrashekar CGPA-8.8; Vyashnavi D CGPA-8.8
Hema Pateel CGPA-8.6; Kavyashree J CGPA-8.6; Kushal R. Prashanth CGPA-8.6; Yogin M.S. CGPA-8.6; Sinchana K.M. CGPA-8.4; Gagana T.R. CGPA-8.4; Sharan Y.S. CGPA-8.2; Bindu B. Prakask CGPA-8.2; Rajesh Patil M. CGPA-8.2
Srinivas T. CGPA-7.6; Harshith M.S. CGPA-7.6; Harsha N.J. CGPA-7.6; Syeda Heena K. CGPA-7.6; Sanjay T.S. CGPA-7.4; Shashank D. CGPA-7.4; Pruthvi R.S. CGPA-7; Dhanush CGPA-7; Purushotham H.R. CGPA-7
Admissions Open from Grade 1 to Grade10 For 2017-18 Mob :- 7760501750,9916143163

SESHADRIPURAM EDUCATIONAL TRUST
SESHADRIPURAM SCHOOL TUMAKURU
SITE NO.32, GEDDALAHALLI, TUMAKURU
ADMISSION STARTED FOR THE YEAR 2017-18
"NOW IN TUMAKURU"
ADMISSIONS OPEN FOR
9th STANDARD
PLAY GROUP
M1, M2, M3
1-5th STANDARD
CBSE & STATE PATTERN
Our Facilities
1.Digital Class Rooms
2. E- Learning Lab
3. Digital Library
4. Advanced Laboratories
5. Eco friendly environment
For more information Call : 94815 56549, 88612 28846, 99868 37837



॥ ಧರ್ಮೋ ರಕ್ಷತಿ ರಕ್ಷಿತಃ ॥ ॥ ಧರ್ಮೋ ರಕ್ಷತಿ ರಕ್ಷಿತಃ ॥
ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನ
ಎ.ಪಿ.ಎಂ.ಸಿ ಯಾರ್ಡ್ ಎದುರು, ಮಹಾಲಕ್ಷ್ಮೀ ಬಡಾವಣೆ, ತುಮಕೂರು
ದಿನಾಂಕ : 02-06-2017 ನೇ ಶುಕ್ರವಾರದಿಂದ 07-06-2017 ನೇ ಬುಧವಾರದ ವರೆಗೆ ನಡೆಯುವ ಪೂಜಾ ಕಾರ್ಯಕ್ರಮಗಳು
ದಿನಾಂಕ: 04-06-2017ನೇ ಭಾನುವಾರ ಬೆ.8.00-9.00ಗಂಟೆಗೆ ರಾಜಗೋಪುರದ ಕಳಸ ಪ್ರತಿಷ್ಠಾಪನೆ
ದಿನಾಂಕ: 05-06-2017, ಸೋಮವಾರ ಬೆಳಗ್ಗೆ 7-30ರಿಂದ ಸುಪ್ರಭಾತ ಸೇವೆ, ಬೆಳಗ್ಗೆ 11-30ಕ್ಕೆ ಗರುಡೋತ್ಸವ ಸಂಜೆ 6-30ಕ್ಕೆ ವಿಶೇಷ ಕಲ್ಯಾಣೋತ್ಸವ
ದಿನಾಂಕ: 06-06-2017, ಮಂಗಳವಾರ ಬೆಳಗ್ಗೆ 7-30ರಿಂದ ಸುಪ್ರಭಾತ ಸೇವೆ, ಬೆಳಗ್ಗೆ 11-30ಕ್ಕೆ ಬ್ರಹ್ಮರಥೋತ್ಸವ 12.30ಗಂಟೆಗೆ ದಾಸೋಹ ಏರ್ಪಡಿಸಿದೆ ಸಂಜೆ 6-30ಕ್ಕೆ ವಿಶೇಷ ಹನುಮಂತೋತ್ಸವ
ದಿನಾಂಕ: 07-06-2017, ಬುಧವಾರ ಬೆಳಗ್ಗೆ 7-30ರಿಂದ ಸುಪ್ರಭಾತ ಸೇವೆ, ಬೆಳಗ್ಗೆ 10-00ಕ್ಕೆ ಶೇಷ ವಾಹನೋತ್ಸವ ಬೆಳಗ್ಗೆ 11-00ಕ್ಕೆ ಚಕ್ರ ಸ್ನಾನ ರಾತ್ರಿ 8-00ಕ್ಕೆ ವಿಶೇಷ ಶಯನೋತ್ಸವ
ದಿವ್ಯ ಸಾನಿಧ್ಯ:
ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ॥ ಶಿವಕುಮಾರ ಮಹಾಸ್ವಾಮೀಜಿಗಳು, ಪೀಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ, ತುಮಕೂರು
ಶ್ರೀ ಶ್ರೀ ವೀರೇಶಾನಂದ ಸ್ವಾಮೀಜೀಯವರು ರಾಮಕೃಷ್ಣ ವಿವೇಕಾನಂದ ಆಶ್ರಮ, ತುಮಕೂರು ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜೀಯವರು, ಹಿರೇಮಠ, ತುಮಕೂರು
ಇವರುಗಳ ದಿವ್ಯ ಸಾನಿಧ್ಯದಲ್ಲಿ ನೆರವೇರುವುದು ನಂತರ ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ
ಶ್ರೀ ಮಹಾಲಕ್ಷ್ಮೀ, ಬಲಮುರಿಗಣಪತಿ, ಉತ್ಸವ ಮೂರ್ತಿ, ಆಂಜನೇಯ ಹಾಗೂ ಸತ್ಯನಾರಾಯಣ ಸ್ವಾಮಿಗೆ ವಿಶೇಷ ಅಲಂಕಾರ
13ನೇ ವರ್ಷದ
ದಿನಾಂಕ: 06-06-2017ನೇ ಮಂಗಳವಾರ ಬೆ.11.30ಕ್ಕೆ
ಶ್ರೀ ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ
ಶ್ರೀ ಸ್ವಾಮಿಗೆ ವಜ್ರ ಕಿರೀಟ ಹಾಗೂ ಶಂಖು ಚಕ್ರ ವಿಶೇಷ ಅಲಂಕಾರ
ದಿನಾಂಕ 06-6-2017ನೇ ಮಂಗಳವಾರ ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ
ಆದರದ ಸುಸ್ವಾಗತ
ಶ್ರೀ ಡಿ.ಎಸ್. ಕುಮಾರ್
ಅಧ್ಯಕ್ಷರು, ಶ್ರೀ ಶ್ರೀನಿವಾಸ ಟ್ರಸ್ಟ್ (ರಿ.), ತುಮಕೂರು







03.06.2017.indd 2 6/4/2017 12:16:45 AM